# ಕೆಸಿಡಿಯಲ್ಲಿ ವಿಶ್ವ ಗುಬ್ಬಚ್ಚಿಗಳ ದಿನ ಆಚರಣೆ



ಧಾರವಾಡ(ಸಮಗ್ರ ಕರ್ನಾಟಕ ಸುದ್ದಿ): ಬುಧವಾರ ವಿಶ್ವ ಗುಬ್ಬಿಗಳ ದಿನಾಚರಣೆ ಅಂಗವಾಗಿ ಕರ್ನಾಟಕದ ಅತಿದೊಡ್ಡ ಪ್ರಾಣಿಶಾಸ್ತ್ರ ವಸ್ತು ಸಂಗ್ರಹಾಲಯವಾದ ಕೆಸಿಡಿ ಪ್ರಾಣಿಶಾಸ್ತ್ರ ವಸ್ತು ಸಂಗ್ರಹಾಲಯಕ್ಕೆ ಧಾರವಾಡ ಜಿಲ್ಲಾ ಅಭಿಯಾನ ಪರಿಸರ ಸಮಿತಿ ಸಂಸ್ಥೆ ಅಧ್ಯಕ್ಷೆ ಜಯಶ್ರೀ ಗೌಳಿ, ಕೆಲಗೇರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳೊಂದಿಗೆ ಮತ್ತು ಮುಖ್ಯ ಶಿಕ್ಷಕಿ ಮಹಾದೇವಿ ದೊಡಮನಿ, ಹಿರಿಯ ದೈಹಿಕ ಶಿಕ್ಷಕ ಎಸ್.ಜಿ.ಕವಟೇಕರ, ಆರ್.ಎಸ್.ಹಿರೇಗೌಡರ, ಶ್ರೀಮತಿ ಫರ್ನಾಂಡಿಸ್, ಸವಿತಾ, ರಾಜೇಂದ್ರರವರ ಜೊತೆಗೆ ಭೇಟಿ ನೀಡಿ, ಎಲ್ಲ ಪ್ರಾಣಿ-ಪಕ್ಷಿಗಳ ಬಗ್ಗೆ ಕೆಸಿಡಿ ಪ್ರಾಣಿಶಾಸ್ತ್ರ ವಸ್ತು ಸಂಗ್ರಹಾಲಯದ ಟ್ಯಾಕ್ಸಿಡರ್ಮಿಸ್ಟ್ ನವೀನ ಪ್ಯಾಟಿಮನಿ ಅವರಿಂದ ಮಾಹಿತಿ ತಿಳಿದುಕೊಂಡರು.

ಈ ಸಂದರ್ಭದಲ್ಲಿ ನವೀನ ಪ್ಯಾಟಿಮನಿ ಅವರು ಪ್ರಾಣಿಶಾಸ್ತ್ರ ವಸ್ತು ಸಂಗ್ರಹಾಲಯದ ಎಲ್ಲ ಪ್ರಾಣಿ-ಪಕ್ಷಿಗಳ ಬಗ್ಗೆ ಮಾಹಿತಿ ನೀಡಿ, ಈಗ ಬೇಸಿಗೆ ಇರುವುದರಿಂದ ಎಲ್ಲ ಪ್ರಾಣಿ-ಪಕ್ಷಿಗಳು ನಮ್ಮ ಹಾಗೆ ತೊಂದರೆಗಳನ್ನು ಅನುಭವಿಸುತ್ತಾ ಇರುತ್ತವೆ. ಮನುಷ್ಯರಾದ ನಾವು ಸ್ವಾರ್ಥತೆಯನ್ನು ಬಿಟ್ಟು ಪ್ರಾಣಿ-ಪಕ್ಷಿಗಳಿಗೆ ಮನೆಯ ಮುಂದೆ ಆಹಾರಧಾನ್ಯಗಳನ್ನು ಮತ್ತು ನೀರನ್ನು ಇಟ್ಟು ಪ್ರಾಣಿ-ಪಕ್ಷಿಗಳಿಗೆ ಸಹಾಯ ಮಾಡಬೇಕು. ಎಲ್ಲ ಪ್ರಾಣಿ-ಪಕ್ಷಿಗಳನ್ನು ಮತ್ತು ಪರಿಸರವನ್ನು ಉಳಿಸಿ ಬೆಳಸಬೇಕು ಎಂದು ಹೇಳಿದರು.

ಶ್ರೀಮತಿ ಜಯಶ್ರೀ ಗೌಳಿ ಮಾತನಾಡಿ, ಗುಬ್ಬಚ್ಚಿಗಳನ್ನು ಉಳಿಸಬೇಕು ಮತ್ತು ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಪ್ರಾಣಿ-ಪಕ್ಷಿಗಳ ಬಗ್ಗೆ ಕಾಳಜಿ ವಹಿಸಿ ಪರಿಸರವನ್ನು ಉಳಿಸಬೇಕೆಂದು ಮಾಹಿತಿ ನೀಡಿದರು.